1-30 P. M.

ಶ್ರೀ ಕೆ. ಎಚ್. ಪಾಟೀಲ್ :—ವೆಂಕಟಾಪುರದ ಬಿಳಿಗಿ ಟೀಚರ್ ಬಗ್ಗೆ ಅನೇಕ ದೂರುಗಳು ಬಂದಿವೆ. ಅವರ ವಿಚಾರದಲ್ಲಿ ನೇರವಾಗಿ ನಾವು ತಮ್ಮಕಡೆ ಬರಬೇಕೆಂದು ಅಪೇಕ್ಷೆ ಮಾಡದೆ, ೪ ವರ್ಷಕ್ಕಿಂತಲೂ ಮೇಲೆ ಅವರು ಅಲ್ಲಿ ಇರುವುದರಿಂದ, ಅವರನ್ನು ತೀವ್ರವಾಗಿ ತಾವಾಗಿಯೇ, ತಮ್ಮ ಇಲಾಖೆಯ ಅಧಿಕಾರಿಗಳ ಮೂಲಕ ಟ್ರಾನ್ಸ್‌ಫರ್ ಮಾಡುತ್ತೀರಾ ? ತಮ್ಮ ಪಕ್ಷದ ಒಬ್ಬ ಎಂ. ಎಲ್. ಸಿ. ಯವರು ಒಮ್ಮೆ ಟ್ರಾನ್ಸ್‌ಫರ್ ಮಾಡಿದ್ದನ್ನು ಪುನಃ ಟ್ರಾನ್ಸ್‌ಫರ್ ಮಾಡುವ ಹಾಗೆ ಹಸ್ತಕ್ಷೇಪ ಮಾಡಿದ್ದಾರೆ. ಆದ್ದರಿಂದ ಇದನ್ನು ನಿಮ್ಮ ಅಧಿಕಾರಿಗಳ ಮೂಲಕವೇ ಒಂದು ಉಚ್ಚ ಆರ್ಡರ್ ಮಾಡಿಸಿ ಅವರನ್ನು ಟ್ರಾನ್ಸ್‌ಫರ್ ಮಾಡಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ :—ಅದೇ ರೀತಿ ನಾವು ಮಾಡುತ್ತಾ ಇರುವುದು. ಕೆಲವು ಸಲ ಎಂ.ಎಲ್.ಸಿ ಗಳು ಎಂ.ಎಲ್.ಎ.ಗಳು ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಬೇಕೆಂದು ಬರುತ್ತಾರೆ. ಇದು ಬಹಳ ಕಷ್ಟವಾದ ಪರಿಸ್ಥಿತಿ. ಕೆಲವು ಪರಿಸ್ಥಿತಿಗಳಲ್ಲಿ ಅವರನ್ನು ಅಲ್ಲಿ ಇಡಬೇಕಾಗುತ್ತದೆ. ಯಾರು ತಮ್ಮ ಕೆಲಸಕಾರ್ಯಗಳನ್ನು ತೃಪ್ತಿಕರವಾಗಿ ಮಾಡುತ್ತಿದ್ದಾರೋ, ಅವರನ್ನು ಅಲ್ಲೇ ಇಡಬಹುದು. ಆದರೆ ಯಾರು ತಂಟೆಕೋರರಾಗಿರುತ್ತಾರೋ, ಅವರನ್ನು ವರ್ಗಾವಣೆ ಮಾಡಬೇಕಾಗುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ :- ಮಕ್ಕಳು ಜ್ಞಾನಾರ್ಜನಮಾಡಿ ಮುಂದೆ ಒಳ್ಳೆಯ ಪ್ರಜೆಗಳಾಗಬೇಕೆಂಬುದು ಶಿಕ್ಷಣ ಇಲಾಖೆಯ ಧೋರಣೆ. ಇತ್ತೀಚೆಗೆ ತಾವು ಮಂತ್ರಿಗಳಾದ ಮೇಲೆ ಆ ರೀತಿಯಾಗ ಬಹುದೆಂದು ಭಾವಿಸಿದ್ದೆವು. ಆದರೆ ಅದು ಆಗಿಲ್ಲ. ಒಂದೇ ಒಂದು ಉಪಾಧ್ಯಾಯನನ್ನು ಒಂದು ವರ್ಷದಲ್ಲಿ ಮೂರು ನಾಲ್ಕು ಬಾರಿ ವರ್ಗ ಮಾಡಿರತಕ್ಕ ದೃಷ್ಟಾಂತಗಳಿವೆ, ಮತ್ತು ೨೫ ವರ್ಷಗಳ ವರೆಗೂ ಒಂದೇ ಕಡೆಯಲ್ಲಿ ಒಬ್ಬ ಉಪಾಧ್ಯಾಯನನ್ನು ಇಟ್ಟಿರುವ ಉದಾಹರಣೆ ಇದೆ. ಇದರ ಬಗ್ಗೆ ಇದನ್ನು ಸುಧಾರಣೆ ಮಾಡಲು ತಾವು ಏನು ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ :—ಇಂತಹ ವಿಷಯಗಳನ್ನು ಶ್ರೀಮಾನ್ ದೊಡ್ಡಬೋರೆಗೌಡರು ಗಮನಕ್ಕೆ ತಂದರೆ ನಿಜವಾಗಿಯೂ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

TAKING OVER OF PRIMARY SCHOOLS RUN BY PRIVATE MANAGEMENTS

347. SRI R. G. WALI (Hubli).—

Will the Minister for Education be pleased to state :—

(*a*) when the final decision to regroup zone or districts for administrative convenience in the matter of taking over Primary schools run by private management by Government will be taken ;

(*b*) whether rent due to the owners of the buildings occupied by the Primary schools belonging to Private Individuals or to the Municipalities have been paid;

(*c*) if not, when the same will be paid ?

SRI K. V. SHANKARA GOWDA (Minister for Education):—

(*a*) Government have not taken over all schools run by private management. As regards reorganisation and strengthening of Inspectorate of Department of Public Instruction, orders have been issued on 22nd June 1970.

(SRI K. V. SHANKARA GOWDA)

(*b*) Yes.

(*c*) Does not arise in view of reply to clause (*b*).

SRI R. G. WALI.—Supplementary to (b) : I understand from the Hubli-Dharwar Municipal Corporation that no rent has been paid so far since the taking over of the buildings by the Government and because of the delay the buildings have not yet been repaired and they are in a very bad condition. So, will the amount be paid early ?

† SRI K. V. SHANKARA GOWDA:—If it is not paid I will surely see that it is paid early.

SRI R. G. WALI:—In order to develop these buildings as a policy; the Government has decided to give 10 or 15 per cent of the cost every year. If that is so, similar facilities may be given to the Hubli-Dharwar Corporation ?

SRI K. V. SHANKARA GOWDA:—That is a matter to be examined in detail.

ಶ್ರೀ ಕೆ. ಎಂ. ತಮ್ಮಯ್ಯ:—ಈಗ ಪುರಸಭೆಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಸೇರಿದ ಪ್ರೌಢ ಶಾಲೆಗಳನ್ನು ಮತ್ತು ಇತರ ಶಾಲೆಗಳನ್ನು ವಹಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಇವುಗಳನ್ನು ವಹಿಸಿ ಕೊಳ್ಳಬೇಕಾದರೆ, ಕಟ್ಟಡಗಳಿಗೆ ಯಾವ ರೀತಿ ಪರಿಹಾರವನ್ನು ಕೊಡುತ್ತೀರಿ ?

SRI K. V. SHANKARA GOWDA:—I want notice for this question.

SRI B. B. SAYANAK:—The owners of private school buildings must get rents certified by the Executive Engineer. Is it not a fact that the Executive Engineers are notissuing the rent certificates immediately because they expect money from private persons ?

SRI K. V. SHANKARA GOWDA:—It is not true.

ಶ್ರೀ ಕೆ. ಎನ್ ವೀರಪ್ಪಗೌಡ:—ಶ್ರೀರಂಗಪಟ್ಟಣದಲ್ಲಿ ಒಂದು ಕಟ್ಟಡಕ್ಕೆ ಬಾಡಿಗೆ ಕೊಡದೆ ಅವರು ಸತ್ಯಾಗ್ರಹ ಕೂಡ ಹೂಡಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

SRI K. V. SHANKARA GOWDA:—I want notice.

SRI S. R. BOMMAI:—After taking over the schools in the Corporation area in the Bombay Karnatak Area, all the old school buildings have been taken over by the Government. Is Government thinking of giving compensation in so far as the buildings that have been taken over by the Government are concerned ?

SRI K. V. SHANKARA GOWDA:—No compensation will be given.

ಶ್ರೀ ಎಸ್. ಎಚ್ ಪುಟ್ಟರಂಗನಾಥ್:—ಸರ್ಕಾರಿ ಶಾಲೆಗಳನ್ನು ಬಾಡಿಗೆ ಕಟ್ಟಡಗಳಲ್ಲಿ ನಡೆಸತಕ್ಕ ಸಂದರ್ಭಗಳಲ್ಲಿ ಕಟ್ಟಡದ ಮಾಲೀಕರಿಗೆ. ಕಿಂಗಳು ಕಿಂಗಳು ಬಾಡಿಗೆ ಪಾವತಿ ಮಾಡುವಾಗ ದುಡ್ಡು ಡಿಮ್ಯಾಂಡ್ ಮಾಡತಕ್ಕ ಸಂದರ್ಭ ಇದೆ. ಇಂತಹ ಒಂದು ಪ್ರಸಂಗ ಹಾಸನದ ಡಿ ಇ ಒ ಮಾಡಿದ್ದಾರೆಂದು ನಾನು ಆಪಾದನೆ ಮಾಡಂತ್ತೀನೆ, ಇದಕ್ಕೆ ತಾವು ಏನು ಹೇಳುತ್ತೀರಿ ?

SRI K. V. SHANKARA GOWDA:—I want notice for this question.

QUARTERS FOR THE ASSISTANT SURGEON AND REVENUE INSPECTOR AT BILIGERE

376. SRI V. L. SIVAPPA (Tiptur):—

Will the Minister for Public Works be pleased to state :—

(*a*) whether it is a fact that quarters for the Assistant Surgeon and Revenue Inspector were sanctioned to be built at Biligere, Tiptur Taluk and foundation also was laid during 1969 on sites given by the Biligere Village Panchayat ;

(*b*) whether the location of the quarters was changed to Kibbanahalli ;

(*c*) the reasons for the sudden change of decision ?

SRI BASAVARAJ MAGAVI (Deputy Minister for Public Works) :—

(*a*) Yes.

(*b*) The location of the Revenue Inspector's Quarters was changed to Kibbanahalli.

(*c*) It was felt that the quarters of the Revenue Inspector should be constructed at the Hobli Head-quarters only.

ಶ್ರೀ ವಿ. ಎಲ್. ಶಿವಪ್ಪ:—ರೆವೆನ್ಯೂ ಇನ್ ಪೆಕ್ಟರ್ ಕ್ವಾರ್ಟರ್ಸ್ ಯಾವಾಗ ಬಿಳಿಗೆರೆಯಿಂದ ಕಿಬ್ಬನಹಳ್ಳಿಗೆ ಬದಲಾಯಿಸಬೇಕೆಂದು ತೀರ್ಮಾನವಾಯಿತು ?

ಶ್ರೀ ಬಸವರಾಜ ಮಾಗವಿ:—ರೆವೆನ್ಯೂ ಅಧಿಕಾರಿಗಳು, ಈ ವೆಟೆರಿನರಿ ಅಸಿಸ್ಟೆಂಟ್ ಸರ್ಜೆನ್ಸ್ ಕ್ವಾರ್ಟರ್ಸ್ ಮತ್ತು ರೆವೆನ್ಯೂ ಇನ್ಸ್ ಪೆಕ್ಟರ್ಸ್ ಕ್ವಾರ್ಟರ್ಸ್ ಮೊದಲು ಬಿಳಿಗೆರೆಯಲ್ಲಿ ಕಟ್ಟಬೇಕೆಂದು ತಿಳಿಸಿದ್ದರು. ಆ ಮೇಲೆ ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿಇರುವುದು ಒಳ್ಳೆಯದೆಂದು ಕಿಬ್ಬನಹಳ್ಳಿಯಲ್ಲಿ ಕಟ್ಟಬೇಕೆಂದು ಹೇಳಿ ಸೂಚನೆ ಬಂತು. ಅದರ ಪ್ರಕಾರ ಅಲ್ಲಿಗೆ ಬದಲಾಯಿಸಲಾಗಿದೆ.

ಶ್ರೀ ವಿ. ಎಲ್ ಶಿವಪ್ಪ:— ಬಿಳಿಗೆರೆಗೆ ಹೆಡ್‌ಕ್ವಾರ್ಟರ್ಸ್ ೬ ಫರ್ಲಾಂಗು ದೂರ ಇರುವುದು. ಬಿಳಿಗೆರೆಯಲ್ಲಿ ವಿದ್ಯಾಭ್ಯಾಸ ಸೌಕರ್ಯ ಇದೆ. ಆಸ್ಪತ್ರೆ ಇದೆ, ಎಲ್ಲಾ ಇದೆ. ಮೊದಲು ಅಲ್ಲಿ ಮಾಡಬೇಕೆಂದು ಮಾಡಿ, ನಂತರ ಅದನ್ನು ಬದಲಾವಣೆ ಮಾಡಿದ್ದುಯಾವ ಇಲಾಖೆ, ಮತ್ತು ಯಾವಾಗ ?